**ದಿನಾಂಕ:20-07-.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆಸಿಕೆ. ವಕೀಲರಿಂದಃ**

1 ನೇ ಹಿರಿಯ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಒ.ಎಸ್.111/2021 ರಲ್ಲಿ ಈ ದಾವೆಯಲ್ಲಿ ಸೇರಿಸಿರುವ ಸ್ವತ್ತುಗಳೊಂದಿಗೆ ಬೇರೆ ಸ್ವತ್ತುಗಳನ್ನು ಸೇರಿಸಿ, ವಿಭಾಗ ಕೋರಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ನನ್ನ ಅಜ್ಜ ಶೇಷಪೂಜಾರಿ ನನ್ನ ಅಜ್ಜಿ ಚೆಲ್ಲಮ್ಮನ ಹೆಸರಿಗೆ ದಿಃ 05.11.1952 ರಲ್ಲಿ ಕೆಲವು ಆಸ್ತಿಗಳ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಮಾಡಿ ಕೊಟ್ಟಿರಬಹುದು. ಸ.ನಂ.200, ಸ.ನಂ.71/3 ಮತ್ತು ಸ.ನಂ.84 ಮತ್ತು ದಾವಾ ಆಸ್ತಿಗಳನ್ನು ಸೇರಿಸಿ, ಶೇಷಪೂಜಾರಿಯವರು ನನ್ನ ಅಜ್ಜಿ ಚೆಲ್ಲಮ್ಮನವರಿಗೆ ದಿಃ05.11.1952 ರಲ್ಲಿ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಕ್ರಯಪತ್ರದ ಮೂಲಕ ತನ್ನ ಹೆಸರಿಗೆ ಬಂದ ಸ್ವತ್ತುಗಳನ್ನು ಚೆಲ್ಲಮ್ಮನವರು ದಿಃ22.07.1986 ರಂದು ವಾದಿಯ ಹೆಸರಿಗೆ ಮರಣಶಾಸನ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮರಣಶಾಸನದ ಆಧಾರದ ಮೇಲೆ ಬೇರೆ ಆಸ್ತಿಗಳೊಂದಿಗೆ ದಾವಾಸ್ವತ್ತಿನ ಹಕ್ಕು ವಾದಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಮರಣ ಶಾಸನಕ್ಕೆ ನನ್ನ ತಂದೆ ಮುತ್ತಪ್ಪ ಬಂಗೇರರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮರಣ ಶಾಸನದ ಮೂಲಕ ತನಗೆ ಬಂದ ಸ.ನಂ.200 ರ ಆಸ್ತಿಯ ಮೇಲೆ ವಾದಿಯು 2015 ರಲ್ಲಿ ಚಿಕ್ಕಮಗಳೂರಿನ ಕಾರ್ಪೋರೇಷನ್ ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತು ಮತ್ತು ಇತರ ಆಸ್ತಿಗಳ ಮೇಲೆ ವಾದಿಯು ಡಿಸಿಸಿ ಬ್ಯಾಂಕಿನಲ್ಲಿ ಸಾಲ ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸಂಪೂರ್ಣ ಹಕ್ಕು ವಾದಿಗೆ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಇದ್ದ ಸಿಲ್ವರ್ ಮರಗಳನ್ನು ನಾವು ಅತಿಕ್ರಮವಾಗಿ ತೆಗೆದಿದ್ದೇವೆ ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ರೂ.30,000/- ನಷ್ಟ ಆಗಿದೆ ಎಂದು ವಾದಿಯು ಪೋಲೀಸರಿಗೆ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿಯು ಸುಳ್ಳು ದೂರು ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಈ ಬಗ್ಗೆ ಪೋಲೀಸರು ನನ್ನನ್ನು ಪೋಲೀಸ್ ಠಾಣೆಗೆ ಕರೆಸಿದ್ದರು. ಈ ಬಗ್ಗೆ ಪೋಲೀಸ್ ಠಾಣೆಯಲ್ಲಿ ಮುಚ್ಚಳಿಕೆ ಬರೆದುಕೊಟ್ಟಿದ್ದೇನೆ ಎಂದರೆ ಪೋಲೀಸರು ಹೇಳಿದ್ದರಿಂದ ಬರೆದುಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ವಾದಿಗೆ ನಷ್ಟವುಂಟಾಗಿದ್ದರೆ ಅದನ್ನು ಭರ್ತಿ ಮಾಡಿಕೊಡುತ್ತೇನೆ ಎಂದು ಪೋಲೀಸ್ ಠಾಣೆಯಲ್ಲಿ ಮುಚ್ಚಳಿಕೆ ಬರೆದುಕೊಟ್ಟಿದ್ದೇನೆ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ತಮ್ಮ. ನಿಪಿ-15 ಅನ್ನು ನಾನು ಮತ್ತು 2 ನೇ ಪ್ರತಿವಾದಿ ಸೇರಿ

ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ನಾವು ಅತಿಕ್ರಮವಾಗಿ ಪಡೆದುಕೊಂಡಿರುವ ದಾವಾ ಆಸ್ತಿಯ ಭಾಗವನ್ನು ವಾದಿಗೆ ಬಿಟ್ಟುಕೊಡಬೇಕಾಗುತ್ತದೆ ಎಂಬ ಕಾರಣದಿಂದ ಸುಳ್ಳು ಪ್ರತಿಪಾದನೆ ಮಾಡಿ ಒ.ಎಸ್.111/2021 ಅನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ಒ.ಎಸ್.111/2021 ರ ಸ್ವತ್ತಿನಲ್ಲಿ ನಮಗೆ ಯಾವುದೇ ಭಾಗ ಬರಬೇಕಾಗಿಲ್ಲ, ಈ ದಾವಾ ಸ್ವತ್ತುಮತ್ತು ಒ.ಎಸ್. 111/2021 ರ ಸ್ವತ್ತಿನ ಸಂಪೂರ್ಣ ಅಧಿಕಾರ ವಾದಿಗೆ ಇರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓಃಹೇಃಕೇಃಸಃಇಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಚಿಕ್ಕಮಗಳೂರು.